ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ,
ಹೆಚ್.ಡಿ.ಕೋಟೆ

**ಸಿ.ಸಿ. ನಂ. 567/2019**

ಸಾಕ್ಷಿಗೆ ದಿನಾಂಕಃ **4.7.2022** ರಂದು ಪ್ರಮಾಣವಚನ ಬೋಧಿಸಲಾಯಿತು.

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಬಸವಣ್ಣ | ಪಿ.ಡಬ್ಲ್ಯೂ-2 |
| ತಂದೆಯ/ಗಂಡನ ಹೆಸರು | : | ಶಿವಣ್ಣ | ಸಿ.ಡಬ್ಲ್ಯೂ-2 |
| ವಯಸ್ಸು | : | 50 | |
| ಉದ್ಯೋಗ | : | ವ್ಯವಸಾಯ | |
| ವಾಸಸ್ಥಳ | : | ಕೋಹಳ | |

<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ಸಾಕ್ಷಿ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ2 ಎಂದು ಗುರುತಾಗಿದ್ದು ಸಾಕ್ಷಿ ಸಹಿಯನ್ನು ನಿಪಿ2 ಬಿ ಎಂದು ಗುರುತಿಸಲಾಯಿತು. ನಿಪಿ2 ಕ್ಕೆ ನಾನು ಸುಮಾರು 4 ವರ್ಷದ ಹಿಂದೆ ಕೋಹಳ ಗ್ರಾಮದಲ್ಲಿರುವ ನಮ್ಮ ಜಮೀನು ಬಳಿ ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿರುವುದಿಲ್ಲ, ಪೋಲಿಸರು ಸಹ ಓದಿ ತಿಳಿಸಿರುವುದಿಲ್ಲ.

(ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

<u>ಪಾಟೀಸವಾಲುಃಎಪಿಪಿ ರವರಿಂದಃ</u>

ದಿನಾಂಕ 27.3.2018 ರಂದು ಚಾಸ 1 ರವರು ಪೋಲಿಸರಿಗೆ ಈ ಕೇಸಿನ ಆರೋಪಿ ಮನ ಬಳಿ ಕೃತ್ಯ ನಡೆದ ಸ್ಥಳ ಅಂದರೆ ತನ್ನ ಮಗನಿಗೆ ಚಿಕಿತ್ಸೆ ನೀಡಿದ ಸ್ಥಳವನ್ನು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನನ್ನ ಮತ್ತು ಚಾಸ 3 ರವರ ಸಮಕ್ಷಮ ಈಗ ಓದಿ ಕೇಳಿಸಿಕೊಂಡ ನಿಪಿ2 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ ಮತ್ತು ಸದರಿ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ</u>

ನಾನು ಮತ್ತು ಚಾಸ 1 ರವರು ಒಂದೇ ಗ್ರಾಮಸ್ಥರು ಎಂದರೆ ಸರಿ. ಪಂಚರಾಗಿ ಬರಲು ಪೋಲಿಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ